**All India Radio: Bangalore**
**National Bulletin In Kannada**
**24.07.2025 7.35am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಇಂದು ಬ್ರಿಟಿಷ್ ಸಹವರ್ತಿ ಕೀರ್ ಸ್ಟಾರ್ಮರ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ

೨. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರಿಂದ ದೆಹಲಿಯಲ್ಲಿಂದು ರಾಷ್ಟ್ರೀಯ ಸಹಕಾರ ನೀತಿ ೨೦೨೫ ಪ್ರಕಟ

೩. ಐದು ವರ್ಷಗಳ ಮೊದಲೇ ಪೆಟ್ರೋಲ್‌ನಲ್ಲಿ ಶೇಕಡ ೨೦ ರಷ್ಟು ಎಥೆನಾಲ್ ಮಿಶ್ರಣ ಗುರಿ ಸಾಧನೆ - ಸಚಿವ ಹರ್ದೀಪ್ ಸಿಂಗ್ ಪುರಿ

೪. ಎಲ್ಲಾ ರಾಜ್ಯಗಳಲ್ಲಿ ಆಕಾಶವಾಣಿ, ದೂರದರ್ಶನ ಕೇಂದ್ರಗಳ ಆಧುನೀಕರಣ ಮತ್ತು ವಿಸ್ತರಣೆಗೆ ಕ್ರಮ - ಸಚಿವ ಡಾ. ಎಲ್. ಮುರುಗನ್

೫. ಫಿಡೆ ಮಹಿಳಾ ಚೆಸ್ ವಿಶ್ವಕಪ್: ಫೈನಲ್ ನಲ್ಲಿ ಸ್ಥಾನ ಗಿಟ್ಟಿಸಿದ ಭಾರತದ ದಿವ್ಯಾ ದೇಶಮುಖ್

><><><><><><><><><><><

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ತಮ್ಮ ಬ್ರಿಟಿಷ್ ಸಹವರ್ತಿ ಕೀರ್ ಸ್ಟಾರ್ಮರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಲಂಡನ್‌ನಿಂದ ವಾಯುವ್ಯಕ್ಕೆ ೫೦ ಕಿ.ಮೀ ದೂರದಲ್ಲಿರುವ ಬ್ರಿಟಿಷ್ ಪ್ರಧಾನಿಯ ಅಧಿಕೃತ ನಿವಾಸವಾದ ಚೆಕರ್ಸ್‌ನಲ್ಲಿ ಮಾತುಕತೆ ನಡೆಯಲಿದೆ. ಎರಡೂ ದೇಶಗಳ ನಡುವಿನ ಕಾರ್ಯತಾಂತ್ರಿಕ ಸಂಬಂಧಗಳಿಗೆ ಹೊಸ ವೇಗವನ್ನು ನೀಡುವತ್ತ ಈ ಮಾತುಕತೆಗಳು ಹೆಚ್ಚಿನ ಗಮನಹರಿಸುವ ನಿರೀಕ್ಷೆಯಿದೆ. ರಕ್ಷಣೆ, ವ್ಯಾಪಾರ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ವಿಸ್ತರಿಸಲು ಎರಡು ದಿನಗಳ ಭೇಟಿಗಾಗಿ ಪ್ರಧಾನಿ ಮೋದಿ ನಿನ್ನೆ ರಾತ್ರಿ ಯುಕೆಗೆ

ಆಗಮಿಸಿದರು. ಭಾರತ-ಯುಕೆ ಮುಕ್ತ ವ್ಯಾಪಾರ ಒಪ್ಪಂದದ -ಎಫ್‌ಟಿಎ ಅಂತಿಮಗೊಳಿಸುವುದು ಅವರ ಭೇಟಿಯ ಪ್ರಮುಖ ಉದ್ದೇಶವಾಗಿದೆ. ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ಅವರ ಸಹವರ್ತಿ ಜೋನಾಥನ್ ರೆನಾಲ್ಡ್ಸ್ ಇಂದು ಇಬ್ಬರು ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ ಎಫ್‌ಟಿಎಗೆ ಸಹಿ ಹಾಕಲಿದ್ದಾರೆ. ಮೂರು ವರ್ಷಗಳ ಮಾತುಕತೆಗಳ ನಂತರ ಅಂತಿಮಗೊಳಿಸಲ್ಪಟ್ಟ ಈ ವ್ಯಾಪಾರ ಒಪ್ಪಂದವು ಎಲ್ಲಾ ವಲಯಗಳಲ್ಲಿ ಭಾರತೀಯ ಸರಕುಗಳಿಗೆ ಸಮಗ್ರ ಮಾರುಕಟ್ಟೆ ಲಭ್ಯತೆಯನ್ನು ಖಚಿತಪಡಿಸುತ್ತದೆ ಮತ್ತು ವ್ಯಾಪಾರ ಮೌಲ್ಯಗಳ ಸುಮಾರು ಶೇ.೧೦೦ ಪ್ರತಿಶತವನ್ನು ಒಳಗೊಂಡಿರುವ ಸುಮಾರು ಶೇ.೯೯ ಉತ್ಪನ್ನ ವರ್ಗಗಳ ಮೇಲಿನ ಸುಂಕ ವಿನಾಯ್ತಿಯಿಂದ ಭಾರತವು ಲಾಭ ಪಡೆಯುತ್ತದೆ.

ಧ್ವನಿ: ರಾಜೇಶ್ (೫೦ ಸೆಕೆಂಡ್)

ತಮ್ಮ ಎರಡು ರಾಷ್ಟ್ರಗಳ ಭೇಟಿಯ ಎರಡನೇ ಚರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಹ್ವಾನದ ಮೇರೆಗೆ ನಾಳೆ ಲಂಡನ್‌ನಿಂದ ಮಾಲ್ಡೀವ್ಸ್‌ಗೆ ಪ್ರಯಾಣಿಸಲಿದ್ದಾರೆ. ಶನಿವಾರ ಮಾಲ್ಡೀವ್ಸ್‌ನ ೬೦ ನೇ ಸ್ವಾತಂತ್ರ್ಯೋತ್ಸವದ ಆಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಗೌರವ ಅತಿಥಿ'ಯಾಗಿ ಭಾಗವಹಿಸಲಿದ್ದಾರೆ. ನರೇಂದ್ರ ಮೋದಿ ಅವರು ಅಧ್ಯಕ್ಷ ಮುಯಿಝು ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ ಮತ್ತು ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಭಾರತದ ನೆರೆಹೊರೆ ಮೊದಲು ನೀತಿ ಮತ್ತು ದೂರದೃಷ್ಟಿ ಮಹಾಸಾಗರದಲ್ಲಿ ಮಾಲ್ಡೀವ್ಸ್ ಬಹಳ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ.

><><><><><><><><><><

ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ದೆಹಲಿಯ ಅಟಲ್ ಅಕ್ಷಯ್ ಊರ್ಜಾ ಭವನದಲ್ಲಿ ರಾಷ್ಟ್ರೀಯ ಸಹಕಾರ ನೀತಿ ೨೦೨೫ ಅನ್ನು ಘೋಷಿಸಲಿದ್ದಾರೆ. ಈ ನೀತಿ ಒಂದು ಪ್ರಮುಖ ಸುಧಾರಣಾ ಉಪಕ್ರಮವಾಗಿದ್ದು ಅದು ಮುಂದಿನ ಎರಡು ದಶಕಗಳ ಕಾಲ ಅಂದರೆ ೨೦೨೫ರಿಂದ ೨೦೪೫ರವರೆಗೆ ಭಾರತದ ಸಹಕಾರ ಚಳುವಳಿಯ ಮಾರ್ಗಸೂಚಿಯಾಗಲಿದೆ ಎಂದು ನಿರೀಕ್ಷಿಸಲಾಗಿದೆ.ಹೊಸ ನೀತಿ

ಸಹಕಾರ ವಲಯದ ಆಧುನಿಕರಣದ ಗುರಿಯನ್ನು ಹೊಂದಿದೆ ಮತ್ತು ಸಹಕಾರದಿಂದ ಸಂಮೃದ್ಧಿ ದೂರದೃಷ್ಠಿಗೆ ಪೂರಕವಾಗಿದೆ ಎಂದು ಸಹಕಾರ ಸಚಿವಾಲಯ ತಿಳಿಸಿದೆ. ಅಲ್ಲದೆ ಈ ನೀತಿ ೨೦೪೭ಕ್ಕೆ ವಿಕಸಿತ ಭಾರತ ಗುರಿ ಸಾಧಿಸುವ ಸಂಕಲ್ಪಕ್ಕೆ ಪೂರಕವಾಗಿ ತಳಮಟ್ಟದಲ್ಲಿ ಸಹಕಾರಿ ಕ್ಷೇತ್ರದ ಬಲವರ್ಧನೆಗೆ ನೀಲ ನಕ್ಷೆ ಹಾಗೂ ಸಹಕಾರ ವಲಯದ ಪಾತ್ರ ಮತ್ತಷ್ಟು ಹೆಚ್ಚಳಕ್ಕೆ ಸಹಕಾರಿಯಾಗಲಿದೆ ಎಂದು ಹೇಳಲಾಗಿದೆ.ಭಾರತದ ಮೊದಲ ರಾಷ್ಟ್ರೀಯ ಸಹಕಾರ ನೀತಿಯನ್ನು ೨೦೦೨ರಲ್ಲಿ ಪ್ರಕಟಿಸಲಾಗಿತ್ತು. ಆನಂತರ ಕೇಂದ್ರದ ಮಾಜಿ ಸಚಿವ ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ೪೮ ಸದಸ್ಯರ ಸಮಿತಿ ಹೊಸ ನೀತಿಯನ್ನು ಸಿದ್ದಪಡಿಸಿದೆ.

><><><><><><><><><><

ಭಾರತವು ನಿಗದಿತ ಗುರಿಗಿಂತ ಐದು ವರ್ಷಗಳ ಮೊದಲೇ ಪೆಟ್ರೋಲ್‌ನಲ್ಲಿ ಶೇ.೨೦ ರಷ್ಟು ಎಥೆನಾಲ್ ಮಿಶ್ರಣವನ್ನು ತಲುಪಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಅವರು ೨೦೧೪ರಲ್ಲಿ ಕೇವಲ ಶೇ. ೧.೫ ರಿಂದ ೨೦೨೫ರಲ್ಲಿ ಶೇ. ೨೦ಕ್ಕೆ ಶುದ್ಧ ಇಂಧನ ಏರಿಕೆಯು ವಿದೇಶಿ ವಿನಿಮಯದಲ್ಲಿ ೧.೩೬ ಲಕ್ಷ ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿದೆ. ಇದು ರೈತರಿಗೆ ೧.೧೮ ಲಕ್ಷ ಕೋಟಿ ರೂಪಾಯಿಗಳನ್ನು ಪಾವತಿಸಿದೆ ಮತ್ತು ೬೯೮ ಲಕ್ಷ ಟನ್ ಇಂಗಾಲದ ಹೊರಸೂಸುವಿಕೆಯನ್ನು ಕಡಿತಗೊಳಿಸಿದೆ ಎಂದು ತಿಳಿಸಿದ್ದಾರೆ.

><><><><><><><><><><

ಎಲ್ಲಾ ರಾಜ್ಯಗಳಲ್ಲಿ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ (ಡಿಡಿಕೆ) ಆಧುನೀಕರಣ ಮತ್ತು ವಿಸ್ತರಣೆಗೆ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ಹೇಳಿದ್ದಾರೆ. ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಅವರು ಕೇಂದ್ರ ವಲಯ ಯೋಜನೆ - ಪ್ರಸಾರ ಮೂಲಸೌಕರ್ಯ ಮತ್ತು ನೆಟ್‌ವರ್ಕ್ ಅಭಿವೃದ್ಧಿ (ಬಿಐಎಂಡ್) ಅಡಿಯಲ್ಲಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದರು. ಸಾರ್ವಜನಿಕ ಪ್ರಸಾರವನ್ನು ಮತ್ತಷ್ಟು ಬಲಪಡಿಸಲು ಬಿಹಾರ ಸೇರಿದಂತೆ ದೇಶಾದ್ಯಂತ ಪ್ರಮುಖ ನವೀಕರಣಗಳು ಇದರಲ್ಲಿ ಸೇರಿವೆ.

೨೦೨೧-೨೦೨೬ರ ಅವಧಿಗೆ ಒಟ್ಟು ಎರಡು ಸಾವಿರದ ೫೩೯ ಕೋಟಿ ರೂಪಾಯಿಗಳ ವೆಚ್ಚದೊಂದಿಗೆ ಈ ಯೋಜನೆಯನ್ನು ಅನುಮೋದಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಯೋಜನೆಯಲ್ಲಿ ಪ್ರಸಾರ ಸಾಧನಗಳ ಡಿಜಿಟಲೀಕರಣ ಮತ್ತು ಆಧುನೀಕರಣ ಮತ್ತು ಹಳೆಯ ವ್ಯವಸ್ಥೆಗಳ ಬದಲಾಗಲಿದೆ ಎಂದು ಡಾ. ಮುರುಗನ್ ಹೇಳಿದರು.

><><><><><><><><><

ಐದು ವರ್ಷಗಳ ಬಿಡುವಿನ ನಂತರ ಭಾರತ ಇಂದು ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ವಿತರಣೆಯನ್ನು ಪುನರಾಂಭಿಸಲಿದೆ.ಬೀಜಿಂಗ್‌ನಲ್ಲಿನ ಭಾರತದ ರಾಯಭಾರಿ ಕಚೇರಿ ತನ್ನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಈ ವಿಷಯ ಹಂಚಿಕೊಂಡಿದ್ದು, ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಮೂಲಕ ಚೀನಾ ಪ್ರಜೆಗಳು ಭಾರತದ ಪ್ರವಾಸಿ ವೀಸಾಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅದರ ಜೊತೆ ಪಾಸ್‌ಪೋರ್ಟ್ ಮತ್ತಿತರ ದಾಖಲೆಗಳನ್ನು ಒದಗಿಸಬಹುದಾಗಿದೆ ಎಂದು ತಿಳಿಸಿದೆ. ಬೀಜಿಂಗ್, ಶಾಂಘೈ ಮತ್ತು ಗ್ವಾಂಗ್ಝೂನಲ್ಲಿರುವ ಭಾರತೀಯ ವೀಸಾ ಕೇಂದ್ರಗಳಿಂದ ವೀಸಾಗಳನ್ನು ಪಡೆದುಕೊಳ್ಳಬಹುದಾಗಿದೆ.೨೦೨೦ರಲ್ಲಿ ಗಲ್ವಾನ್ ಕಣಿವೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡು ಬಿಕ್ಕಟ್ಟು ಉಂಟಾದ ಹಿನ್ನೆಲೆಯಲ್ಲಿ ಭಾರತ ಪ್ರವಾಸಿ ವೀಸಾ ವಿತರಣೆಯನ್ನು ಸ್ಥಗಿತಗೊಳಿಸಿತ್ತು.

><><><><><><><><><

ದೀರ್ಘಾವಧಿಯಲ್ಲಿ ದ್ವಿಪಕ್ಷೀಯ ರಕ್ಷಣಾ ಸಹಕಾರ ಸಂಬಂಧಗಳನ್ನು ಮತ್ತಷ್ಟು ಬಲವರ್ಧನೆಗೊಳಿಸಲು ಭಾರತ ಮತ್ತು ಇಸ್ರೇಲ್ ಪರಸ್ಪರ ಒಪ್ಪಿವೆ. ದೆಹಲಿಯಲ್ಲಿ ನಿನ್ನೆ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಮತ್ತು ಇಸ್ರೇಲ್ ನ ರಕ್ಷಣಾ ಸಚಿವಾಲಯದ ಮಹಾನಿರ್ದೇಶಕ ಮೇಜರ್ ಜನರಲ್ ಅಮೀರ್ ಬರಂ ಅವರೊಂದಿಗೆ ನಡೆದ ಮಾತುಕತೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲವರ್ಧನೆಗೊಳಿಸಿ ಅದಕ್ಕೆ ಸಾಂಸ್ಥಿಕ ಚೌಕಟ್ಟು ನೀಡುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಿ ಒಮ್ಮತಕ್ಕೆ ಬರಲಾಯಿತು ಎಂದು ರಕ್ಷಣಾ ಸಚಿವಾಲಯ ಪ್ರಕಟಣೆ ತಿಳಿಸಿದೆ.ಮಾತುಕತೆ ವೇಳೆ ಇಸ್ರೇಲ್‌ನ ಅಧಿಕಾರಿ ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ

ಖಂಡಿಸಿದರು ಮತ್ತು ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟಕ್ಕೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಹೇಳಿದರು.

><><><><><><><><><><

ನಿನ್ನೆ ಜಾರ್ಜಿಯಾದ ಬಟುಮಿಯಲ್ಲಿ ನಡೆದ ಫಿಡೆ ಮಹಿಳಾ ಚೆಸ್ ವಿಶ್ವಕಪ್ ೨೦೨೫ರ ಸೆಮಿಫೈನಲ್‌ನ ೨ ನೇ ಪಂದ್ಯದಲ್ಲಿ , ಭಾರತದ ದಿವ್ಯಾ ದೇಶಮುಖ್ ಚೀನಾದ ಟಾನ್ ಝೊಂಗಿಯನ್ನು ಸೋಲಿಸಿ ಫೈನಲ್‌ಗೆ ಸ್ಥಾನ ಪಡೆದರು.ಮಂಗಳವಾರ ನಡೆದ ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡ ನಂತರ, ಭಾರತದ ಚೆಸ್ ತಾರೆ ಸೆಮಿಫೈನಲ್‌ನಲ್ಲಿ ೧.೫-೦.೫ ಅಂತರದ ಗೆಲುವು ಸಾಧಿಸಿದರು. ಈ ಗೆಲುವಿನೊಂದಿಗೆ, ದೇಶಮುಖ್ ೨೦೨೬ ರಲ್ಲಿ ನಡೆಯಲಿರುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಥಾನ ಪಡೆದರು ಮತ್ತು ಅವರು ಮೊದಲ ಗ್ರ್ಯಾಂಡ್ ಮಾಸ್ಟರ್ ನಾರ್ಮ್ ಅನ್ನು ಸಹ ಪಡೆದುಕೊಂಡರು.

><><><><><><><><><><

ಇಂಗ್ಲೆಂಡ್ ನ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಕ್ರಿಕೆಟ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯದ ಮೊದಲನೇ ದಿನ , ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ ೮೩ ಓವರ್‌ಗಳಲ್ಲಿ ೪ ವಿಕೆಟ್‌ಗೆ ೨೬೪ ರನ್ ಗಳಿಸಿದೆ.

><><><><><><><><><><